

# ಗ್ರಂಥಾಲಯವೇ ಕಲಾಕೃತಿ

■ ಪ್ರಿಯಾಂಕ ವಿ.ಎಚ್.

ಅಮೆರಿಕದ ಯೇಲ್ ವಿಶ್ವವಿದ್ಯಾಲಯದ ಆಕರ್ಷಣೆಗಳಲ್ಲಿ ಅಪರೂಪದ ಪುಸ್ತಕಗಳು ಹಾಗೂ ಹಸ್ತಪ್ರತಿಗಳನ್ನು ಒಳಗೊಂಡ ಲೈಬ್ರರಿಯೂ ಸೇರಿದೆ. ಪ್ರಾಚೀನ ಹಸ್ತಪ್ರತಿಗಳು, ಅಪರೂಪದ ಪುಸ್ತಕಗಳು, ನಕ್ಷೆಗಳು ಮತ್ತು ಹಳೆಯ ದಾಖಲೆಗಳ ಸಂಗ್ರಹಣೆ ಮತ್ತು ಸಂರಕ್ಷಣೆಗೆಂದೇ ಮೀಸಲಾಗಿರುವ ಈ ವಿಶಿಷ್ಟ ಗ್ರಂಥಾಲಯವು ಬೃಹತ್ ಕಟ್ಟಡವನ್ನು ಹೊಂದಿದೆ.

ಕನೆಕ್ಟಿಟ್ ನ್ಯೂ ಹ್ಯಾವೆನ್‌ನ ಯೇಲ್ ಯೂನಿವರ್ಸಿಟಿ ಕ್ಯಾಂಪಸ್‌ನಲ್ಲಿರುವ ಈ ಬೃಹತ್ ಲೈಬ್ರರಿಯು 1963ರಲ್ಲಿ ಪೂರ್ಣಗೊಂಡಿತು. ಅಂದಾಜು 7 ಲಕ್ಷ 80 ಕೃತಿಗಳ ಸಂಗ್ರಹಕ್ಕೆ ಸಾಕಾಗುವಷ್ಟು ಸ್ಥಳಾವಕಾಶವನ್ನು ಹೊಂದಿರುವ ಈ ಗ್ರಂಥಾಲಯವು, ಪ್ರಸ್ತುತ 5 ಲಕ್ಷ ಗ್ರಂಥಗಳನ್ನು ಹೊಂದಿದೆ. ಮೂಲ ಗುಟೆನ್ ಬರ್ಗ್ ಬೈಬಲ್ ಮತ್ತು ನಿಗೂಢ ವ್ಯೋನಿಚ್ ಹಸ್ತಪ್ರತಿಯೂ ಸೇರಿದಂತೆ ಸಾವಿರಾರು ಅಪೂರ್ವ ಹಸ್ತಪ್ರತಿಗಳು ಇಲ್ಲಿವೆ.

> ಪ್ರಾಚೀನ ಹಸ್ತಪ್ರತಿಗಳು ಹಾಗೂ ಅಮೂಲ್ಯ ಗ್ರಂಥಗಳಿಂದಾಗಿ ಯೇಲ್ ವಿಶ್ವವಿದ್ಯಾಲಯದ ಗ್ರಂಥಾಲಯ ವಿಶ್ವಪ್ರಸಿದ್ಧಿ ಪಡೆದಿದೆ.

ಗ್ರಂಥಾಲಯ ಕಟ್ಟಡ ನಿರ್ಮಾಣಕ್ಕೂ ಮೊದಲು, ಯೇಲ್ ಕಾಲೇಜ್‌ನ ಅಪರೂಪದ ಹಾಗೂ ಮೌಲ್ಯದಾಯಕ ಪುಸ್ತಕಗಳನ್ನು ಈಗ 'ಡ್ವೈಟ್ ಹಾಲ್' ಎಂದು ಕರೆಯಲಾಗುವ ಕಾಲೇಜ್ ಲೈಬ್ರರಿಯ ವಿಶೇಷ ಶೆಲ್ಫ್‌ಗಳಲ್ಲಿ ಇರಿಸಲಾಗಿತ್ತು. 1930ರಲ್ಲಿ ಸ್ಟರ್ಲಿಂಗ್ ಸ್ಮಾರಕ ಗ್ರಂಥಾಲಯವನ್ನು ಕಟ್ಟುವಾಗ ವಿಶ್ವವಿದ್ಯಾಲಯವು, ಅಪರೂಪದ ಪುಸ್ತಕಗಳ ಅಧ್ಯಯನಕ್ಕೆಂದೇ ಮೀಸಲಾದ ಕೊಠಡಿಯನ್ನು ನಿರ್ಮಿಸಿತು. ಸಂಗ್ರಹ ಹೆಚ್ಚುತ್ತಾ ಹೋದಂತೆ ಸ್ಟರ್ಲಿಂಗ್ ಅಧ್ಯಯನ ಕೊಠಡಿಯು ತುಂಬಾ ಚಿಕ್ಕದಾಯಿತು ಮತ್ತು ಸೂಕ್ಷ್ಮ ಹಸ್ತಪ್ರತಿಗಳ ಸಂಗ್ರಹಕ್ಕೆ ಸೂಕ್ತವೆನಿಸುವ ದೊಡ್ಡ ಲೈಬ್ರರಿಯ ಅವಶ್ಯಕತೆ ಕಂಡುಬಂದಿತು.

ಗ್ರಂಥಾಲಯದ ಕಟ್ಟಡವನ್ನು ವರ್ಮೊಂಟ್ ಅಮೃತಶಿಲೆ, ಗ್ರಾನೈಟ್, ಕಂಚು ಮತ್ತು ಗಾಜನ್ನು ಬಳಸಿ ನಿರ್ಮಿಸಲಾಗಿದೆ. ಮಧ್ಯ ಭಾಗದಲ್ಲಿ ಪುಸ್ತಕಗಳ ಗಾಜಿನ ಗೋಪುರವಿದ್ದು, ಅದು ಆರು ಮಹಡಿಗಳಷ್ಟು ಎತ್ತರವಾಗಿದೆ. ಈ ಗೋಪುರವು 1.80 ಲಕ್ಷ ಪುಸ್ತಕಗಳನ್ನಿಡುವಷ್ಟು ಸ್ಥಳಾವಕಾಶದ ಸಾಮರ್ಥ್ಯವನ್ನು ಹೊಂದಿದೆ. ಎರಡು ದೊಡ್ಡ ಗಾತ್ರದ ಅಮೃತಶಿಲೆಯ ಮೆಟ್ಟಿಲುಗಳಿರುವ ಅಟ್ಟಗಳು ಮೇಲ್ಭಾಗದವರೆಗೂ ಚಾಚಿಕೊಂಡಿವೆ. ಗಾಜಿನ ಗೋಪುರವನ್ನು ಸುತ್ತಲು ಜನರಿಗೆ ಅವಕಾಶವಿದೆ. ಅಪರೂಪದ ಪುಸ್ತಕಗಳಿಗೆ ಹಾನಿ ಉಂಟಾಗದಂತೆ ವಿಶೇಷ ಎಚ್ಚರಿಕೆ ತೆಗೆದುಕೊಳ್ಳಲಾಗಿದೆ. ಆ ಕಾರಣದಿಂದಲೇ ನೀರನ್ನು ಸಿಂಪಡಿಸುವ ಬೆಂಕಿ ನಿರೋಧಕ ವ್ಯವಸ್ಥೆಗೆ ಬದಲಾಗಿ, ಹ್ಯಾಲೊನ್ ಮತ್ತು ಇನರ್ಜನ್ ಅನಿಲಗಳ ಸಂಯೋಜನೆಯನ್ನು ಪಂಪ್ ಮಾಡುವುದರ ಮೂಲಕ ದಹನ ಕ್ರಿಯೆಯನ್ನು ನಿಲ್ಲಿಸುವಂತಹ ವಿಶೇಷ ಅಗ್ನಿ ನಿರೋಧಕ ವ್ಯವಸ್ಥೆಯನ್ನು ಗೋಪುರದಲ್ಲಿ ಅಳವಡಿಸಲಾಗಿದೆ.

ಲೈಬ್ರರಿಯ ಕೆಳಗೆ ಎರಡು ಹಂತಗಳಿದ್ದು, ಅವುಗಳಲ್ಲಿ ಯಾಂತ್ರಿಕ ಸಲಕರಣೆಗಳು ಮತ್ತು ದೊಡ್ಡ ಪುಸ್ತಕಗಳ ಸ್ಟಾಕ್, ಕ್ಯಾಟಲಾಗ್ ಮತ್ತು ಉಲ್ಲೇಖನ ಕೊಠಡಿ, ಸಿಬ್ಬಂದಿಗಳ ಕಚೇರಿಗಳು, ಅಧ್ಯಯನ ಕೊಠಡಿ ಮೊದಲಾದವುಗಳು ಇವೆ. ಈ ಗ್ರಂಥಾಲಯವು ಯೇಲ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ, ಬೋಧಕರಿಗೆ ಮತ್ತು ಭೇಟಿ ನೀಡುವ ಸಂಶೋಧಕರಿಗೆ ಮುಕ್ತವಾಗಿದೆ. ■